ಆ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಹೆಚ್ಟಿ ವಿದ್ಯುತ್ ಸಂಪರ್ಕವನ್ನು ಒದಗಿಸಿದ ತಕ್ಷಣ ಎಲ್ಲಾ ಉಪಕರಣಗಳನ್ನು ಚಾಲನೆಗೆ ತರಲಾಗುವುದು.

ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಅನುದಾನ.

೧೩೬೨(೧೬೧೨)

ಶ್ರೀ ಅಭಯ ಚಂದ್ರ ಕೆ.(ಮೂಡಬಿದ್ರೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ತಾಂತ್ರಿಕ ಶಿಕ್ಷಣ ಸಂಸ್ಥೆ (ಪಾಲಿಟೆಕ್ನಿಕ್)ಗಳಿಗೆ ಅನುದಾನ ಕೊಡುವ ಯೋಜನೆ ಯಾವ ಹಂತದಲ್ಲಿದೆ;

೨. ಅನುದಾನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ?

ಡಾ:ಜಿ.ಪರಮೇಶ್ವರ: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

೧. ಸರ್ಕಾರಿ ಆದೇಶ ಸಂಖ್ಯೆ:ಇಡಿವಿಲಓ ಟಿಪಿಇ ೯೮ ದಿನಾಂಕ: ೫-೨-೨೦೦೧ ಮತ್ತು ೦೩-೦೩-೨೦೦೧ರ ಅನುಸಾರ ೩೩ ಪಾಲಿಟೆಕ್ನಿಕ್‌ಗಳನ್ನು ಅನುದಾನದಡಿ ತರಲಾಗಿದೆ.

೨. ಪ್ರತಿಯೊಂದು ಪಾಲಿಟೆಕ್ನಿಕ್‌ನ ಬೋಧಕ: ಬೋಧಕೇತರ ಹುದ್ದೆಗಳ ವಿವರಗಳನ್ನು ಎಐಸಿಟಿಇ ಮಾರ್ಗಸೂಚಿ ಅನುಸಾರ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಸದರಿ ಪಾಲಿಟೆಕ್ನಿಕ್‌ಗಳಿಗೆ ಅನುದಾನ ಬಿಡುಗಡೆಗೆ ಕ್ರಮ ಜರುಗಿಸಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು.

೧೩೬೪(೧೭೫೧)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್(ಸೋಮವಾರಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿರುವ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು: (ತಾಲ್ಲೂಕವಾರು, ಹುದ್ದೆವಾರು ಮಾಹಿತಿ ನೀಡುವುದು)

ಆ) ಸದರಿ ಹುದ್ದೆಗಳು ಎಷ್ಟು ದಿನಗಳಿಂದ ಖಾಲಿ ಇವೆ. ಇದುವರೆಗೂ ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು.

ಇ) ಇನ್ನು ಎಷ್ಟು ದಿನಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹುದ್ದೆಗಳ ಭರ್ತಿಗಾಗಿ ಸರ್ಕಾರ ಇದುವರೆಗೂ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಡಾ: ಎ.ಬಿ.ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ೩೯೩ ಹುದ್ದೆಗಳು ಕೊಡಗು ಜಿಲ್ಲೆಯಲ್ಲಿ ಖಾಲಿ ಇವೆ (ಅನುಬಂಧ ೧ ರಲ್ಲಿ ಮಾಹಿತಿ ಒದಗಿಸಲಾಗಿದೆ).

ಆ) ವಿವರಗಳನ್ನು ಅನುಬಂಧ ೧ರಲ್ಲಿ ತೋರಿಸಿದೆ. ಆರ್ಥಿಕ ಮಿತವ್ಯಯ ನೀತಿ ಇದ್ದುದರಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಿರುವುದಿಲ್ಲ

ಇ) ಖಾಲಿ ಇರುವ ವೈದ್ಯರು ಹಾಗೂ ಅಗತ್ಯವಾದ ವೈದ್ಯೇತರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಯವರೆಗೆ ಸರ್ಕಾರವು ಅಧಿಕಾರ ನೀಡಿದೆ. ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ೫೫೦ ವೈದ್ಯರ ನೇರ ನೇಮಕಾತಿಗೆ ದಿನಾಂಕ ೨೬-೨-೨೦೦೧ ರಂದು ಅರ್ಜಿ ಕರೆಯಲಾಗಿದೆ. ಹಾಗೂ ಕೊಡಗು ಜಿಲ್ಲೆಯ ಖಾಲಿ ವೈದ್ಯರ ಹುದ್ದೆಗಳು ಈ ನೇಮಕಾತಿ ಸಮಯದಲ್ಲಿ ಭರ್ತಿಮಾಡಲಾಗುವುದು. ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿದ್ದ ಶುಶ್ರೂಷಕರ ಹುದ್ದೆಗಳನ್ನು ನೇಮಕ ಮಾಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇತರೆ ವೈದ್ಯೇತರ ಹಾಗೂ ಲಿಪಿಕ ವರ್ಗದ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಪದೋನ್ನತಿ ಪ್ರಕ್ರಿಯೆ ಚಾಲನೆಯಲ್ಲಿದೆ.

ಅನುಬಂಧ - ೧

ಕೊಡಗು ಜಿಲ್ಲೆಯ ಆರೋಗ್ಯ ಮತ್ತು ಕುಕ. ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ.

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ
೧.	ಶಸ್ತ್ರ ಚಿಕಿತ್ಸಕರು	೧
೨.	ಕಿರಿಯ ತಜ್ಞರು	೧
೩.	ಸೈಕಿಯಾಟ್ರಿಸ್ಟ್	೧
೪.	ಸಹಾಯಕ ಶಸ್ತ್ರಚಿಕಿತ್ಸಕರು, ಗ್ರೇಡ್-೩	೩
೫.	ಕ್ಲಿನಿಕಲ್ ಸೈಕಿಯಾಟ್ರಿಸ್ಟ್	
೬.	ಕಛೇರಿ ಅಧೀಕ್ಷಕರು	೧
೭.	ಹಿರಿಯ ಫಾರ್ಮಾಸಿಸ್ಟ್	೨
೮.	ಕಿರಿಯ ಫಾರ್ಮಾಸಿಸ್ಟ್	೪
೯.	ಹಿರಿಯ ಪ್ರಯೋಗಶಾಲೆ ತಂತ್ರಜ್ಞ	೫
೧೦.	ಕಿರಿಯ ಪ್ರಯೋಗಶಾಲೆ ತಂತ್ರಜ್ಞ	೧
೧೧.	ಹಿರಿಯ ಶುಶ್ರೂಷಕ ದಾದಿಯರು	೪
೧೨.	ಶುಶ್ರೂಷಕಿಯರು	೩
೧೩.	ಆಫ್ತಾಕ್ವನಿಸ್ಟ್	೨
೧೪.	ರೇಡಿಯೋಗ್ರಾಫರ್	೧
೧೫.	ಇ.ಸಿ.ಜಿ. ಟೆಕ್ನೀಶಿಯನ್	೧
೧೬.	ಕ್ಷೇತ್ರ ಶಿಕ್ಷಣಾಧಿಕಾರಿ	೧

೧೭.	ಕಿರಿಯ ಆರೋಗ್ಯ ಸಹಾಯಕರು (ಪುರುಷ)	೧
೧೮.	ಟೆಕ್ನೀಶಿಯನ್ (ಕೆಹೆಚ್ಎಸ್ಡಿಪಿ)	೭
೧೯.	ಕಿರಿಯ ಅಭಿಯಂತರರು	೧
೨೦.	ಡಿ-ಗುಂಪಿನ ಸಿಬ್ಬಂದಿ	೪೦

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಖಾಲಿರುವ ಹುದ್ದೆಗಳ ಸಂಖ್ಯೆ ಮಡಿಕೇರಿ	ವಿರಾಜ ಪೇಟೆ	ಸೋಮವಾರ ಪೇಟೆ	ಸುಮಾರು ಖಾಲಿ ಇರುವ ಅವಧಿ
೧	೨	೩	೪	೫	೬
೨೧.	ಇಮ್ಯುನೈಜೇಶನ್ ಅಧಿಕಾರಿ	೧	-	-	೧ ವರ್ಷ
೨೨.	ವೈದ್ಯಾಧಿಕಾರಿಗಳು (ಕು.ಕ)	೧	-	-	೧ ವರ್ಷ
೨೩.	ಜಿಲ್ಲಾ ಮಲೇರಿಯಾಧಿಕಾರಿ	೧	-	-	೧ ತಿಂಗಳು
೨೪.	ತಾಲ್ಲೂಕು ವೈದ್ಯಾಧಿಕಾರಿ	೧	೧	೧	೫ ವರ್ಷ
೨೫.	ಸಹಾಯಕ ಶಸ್ತ್ರ ಚಿಕಿತ್ಸಕರು	-	೧	-	೩ ವರ್ಷ
೨೬.	ದಂತ ವೈದ್ಯಾಧಿಕಾರಿ	-	-	೧	೧೦ ವರ್ಷ
೨೭.	ವೈದ್ಯಾಧಿಕಾರಿಗಳು	೬	೧೩	-	೩ ವರ್ಷ
೨೮.	ಸರ್ವಿಸ್ ಇಂಜಿನಿಯರ್	೧	-	೧	೧೧ ವರ್ಷ
೨೯.	ಗೆಜೆಟೆಡ್ ಅಸಿಸ್ಟಂಟ್	೧	-	-	೨ ವರ್ಷ
೩೦.	ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ	೧	-	-	೭ ವರ್ಷ
೩೧.	ಡೆಪ್ಯೂಟಿ ಹೆಲ್ತ ಎಜ್ಯುಕೇಶನ್ ಅಧಿಕಾರಿ	೨	-	-	೫ ವರ್ಷ
೩೨.	ಆರೋಗ್ಯ ಅಧೀಕ್ಷಕರು	೧	-	-	೩ ವರ್ಷ
೩೩.	ಸಹಾಯಕ ಸಂಖ್ಯಾಧಿಕಾರಿ	೨	-	-	೧೫ ವರ್ಷ
೩೪.	ಅಧೀಕ್ಷಕರು	೧	-	೧	೩ ವರ್ಷ
೩೫.	ಹಿರಿಯ ಶೀಘ್ರಲಿಪಿಗಾರ ದರ್ಜೆ-೧ (ಆಂಗ್ಲ)	೧	-	-	೧೫ ವರ್ಷ

೩೬.	ಕಿರಿಯ ಶೀಘ್ರಲಿಪಿಗಾರ ದರ್ಜೆ(ಕನ್ನಡ)	೧	-	-	೧೫ ವರ್ಷ
೩೭.	ಬೆರಳಚ್ಚುಗಾರ	೧	-	-	೭ ವರ್ಷ
೩೮.	ಪ್ರಥಮ ದರ್ಜೆ ಸಹಾಯಕರು	೫	೮	೧೦	೧೦ ವರ್ಷ
					೧೨ ವರ್ಷ
					೪ ವರ್ಷ
೩೯.	ದ್ವೀತೀಯ ದರ್ಜೆ ಸಹಾಯಕರು	೧	೯	೫	೫ ವರ್ಷ
					೧೦ ವರ್ಷ
					೮ ವರ್ಷ
೪೦.	ಜಿಲ್ಲಾ ಶುಶ್ರೂಷಾಧೀಕ್ಷಕರು, ದರ್ಜೆ-೨	-	-	೧	೫ ವರ್ಷ
೪೧.	ಗುಮಾಸ್ತ ಹಾಗೂ ಬೆರಳಚ್ಚುಗಾರ	-	೧	೩	೧೦ ವರ್ಷ
೪೨.	ಬ್ಲಾಕ್ ಆರೋಗ್ಯ ಶಿಕ್ಷಕರು	೨	೪	೨	೫ ವರ್ಷ
೪೩.	ಫಾರ್ಮಾಸಿಸ್ಟ್‌ಗಳು	೧೫	೧೭	೧೬	೧೦ ವರ್ಷ
೪೪.	ಶುಶ್ರೂಷಕರು	೧	೫	೧	೩ ವರ್ಷ
೪೫.	ಹಿರಿಯ ಆರೋಗ್ಯ ಸಹಾಯಕಿ	-	೨	೧	೩ ವರ್ಷ
೪೬.	ಕಿರಿಯ ಆರೋಗ್ಯ ಸಹಾಯಕ (ಪು)	೪	೧	೨	೧ ವರ್ಷ
೪೭.	ಕ್ಷ - ಕಿರಣ ತಂತ್ರಜ್ಞ	೧	-	೧	೪ ವರ್ಷ
೪೮.	ಹಿರಿಯ ಪ್ರಯೋಗಾಲಯ ತಂತ್ರಜ್ಞ	೪	-	೧	೧೨ ವರ್ಷ

೪೯.	ಕಿರಿಯ ಪ್ರಯೋಗಾಲಯ ತಂತ್ರಜ್ಞ	೨	೫	೩	೪ ವರ್ಷ
೫೦.	ಆರೆ ವೈದ್ಯಾಧಿಕಾರಿ ಕಾರ್ಯಕರ್ತರು	-	೧	೧	೧ ವರ್ಷ
೫೧.	ನೇತ್ರ ತಂತ್ರಜ್ಞರು	೨	೧	೧	೩ ವರ್ಷ
೫೨.	ಸ್ಕಿಲ್ಡ್ ಮೆಕ್ಯಾನಿಕ್	೧	-	-	೨ ವರ್ಷ
೫೩.	ಪ್ರೊಜೆಕ್ಷನಿಸ್ಟ್	೧	-	-	೫ ವರ್ಷ
೫೪.	ಎಲೆಕ್ಟ್ರಿಶಿಯನ್	೨	-	-	೨೦ ವರ್ಷ
೫೫.	ರೆಫ್ರಿಜರೇಟರ್ ಮೆಕ್ಯಾನಿಕ್	೧	-	-	೪ ವರ್ಷ
೫೬.	ಕಿರಿಯ ಆರೋಗ್ಯ ಸಹಾಯಕ	೧೭	೨೨	೧೫	೧೮ ವರ್ಷ ೧೫ ವರ್ಷ ೧೦ ವರ್ಷ ೩ ವರ್ಷ
೫೭.	ಕಿರಿಯ ಆರೋಗ್ಯ ಸಹಾಯಕಿ	೧	೧	೧	೬ ತಿಂಗಳು
೫೮.	ವಾಹನ ಚಾಲಕರು	೩	-	೧	೫ ವರ್ಷ ೧ ವರ್ಷ
೫೯.	ಗ್ರೂಪ್ 'ಡಿ'	೧೪	೪೪	೧೩	೧೦ ವರ್ಷ ೮ ವರ್ಷ ೫ '' ೩ '' ೧ ''
			೮೯	೧೩೬	೮೭